ಪಂಚತಂತ್ರವೂ ಸೇರಿದಂತೆ ನಮ್ಮ ಅನೇಕ ನೀತಿಕಥೆಗಳಲ್ಲಿ, ಪುರಾಣದ ಕಥೆಗಳಲ್ಲಿ; ಅಷ್ಟೇ ಯಾಕೆ, ಸೃಜನಶೀಲ ಸಾಹಿತ್ಯ ಪ್ರಕಾರದ ಹಲವು ಸಂದರ್ಭಗಳಿಗೆ ಅರ್ಥಶಾಸ್ತ್ರದ ತತ್ವಗಳನ್ನು ನಾವು ಆರೋಪಿಸಿಕೊಳ್ಳಬಹುದು. ನೇರವಾಗಿ ಅದನ್ನೇ ಅರಹುವುದು ಆಯಾ ಸಾಹಿತ್ಯದ ಉದ್ದೇಶವಲ್ಲದಿದ್ದರೂ, ನಮ್ಮ ಅರ್ಥಶಾಸ್ತ್ರದ ಕಲಿಕೆಗೇನೂ ಅವು ತಡೆಯೊಡ್ಡುವುದಿಲ್ಲ. ತನ್ನ ಶಿಷ್ಯನ ಕೈಯಲ್ಲಿ ಹೊಳೆಯುವ ಸಣ್ಣ ಕಲ್ಲೊಂದನ್ನು ನೀಡಿ ಅದರ ಬೆಲೆ ತಿಳಿದುಕೊಂಡು ಬರುವಂತೆ ಗುರುವೊಬ್ಬ ತಾಕೀತು ಮಾಡುವ ಪ್ರಸಂಗವನ್ನೇ ತೆಗೆದುಕೊಳ್ಳಿ. ತರಕಾರಿ ಮಂಡಿಯೊಂದರಲ್ಲಿ ಆ ಕಲ್ಲಿನ ಬದಲಾಗಿ ಬಾಳೆಗೊನೆಯನ್ನು ಕೊಡುವುದಾಗಿ ಹೇಳಿದರೆ, ದಿನಸಿ ಅಂಗಡಿಯಲ್ಲಿ ಒಂದು ಮೂಟೆ ಅಕ್ಕಿ, ಲೋಹದ ಉಗ್ರಾಣದಲ್ಲಿ ದೊಡ್ಡ ಹಂಡೆಯ ಕೊಡುಗೆ ದೊರೆಯುತ್ತದೆ ಶಿಷ್ಯನಿಗೆ. ಕೊನೆಯಲ್ಲಿ ಹೋದ ಆಭರಣದಂಗಡಿಯಲ್ಲಿ, ಅದು ಬೆಲೆ ಕಟ್ಟಲಾಗದ ವಜ್ರದ ಹರಳೆಂದೂ ಅದನ್ನು ಕೊಳ್ಳುವ ಶಕ್ತಿ ತನಗಿಲ್ಲವೆಂಬ ಉತ್ತರ ಸಿಗುತ್ತದೆ. ಇಷ್ಟನ್ನೇ ಆಧರಿಸಿ ವಸ್ತುವೊಂದರ ಉಪಯುಕ್ತತಾ ಮೌಲ್ಯ ಹಾಗೂ ವಿನಿಮಯ ಮೌಲ್ಯಗಳ ಅಧ್ಯಯನ ಮಾಡಬಹುದಲ್ಲವೇ?



ಇಲ್ಲೊಂದು ಕಥೆಯಿದೆ ನೋಡಿ. ಫ್ರೆಂಚ್ ಲೇಖಕ ಅಲೆಕ್ಸಾಂಡರ್ ಡುಮಾಸ್‌ನ **The Count of Monte Cristo** ಎನ್ನುವ ಕಾದಂಬರಿ 'ರಾಜಾ ಮಲಯಸಿಂಹ' ಎನ್ನುವ ಹೆಸರಿನಲ್ಲಿ ಕನ್ನಡದಲ್ಲಿ ಲಭ್ಯವಿದೆ. ಇಲ್ಲಿಯ ನಾಯಕ ಅನೇಕರಿಂದ ವಂಚಿತನಾಗಿ ಬಹು ವರ್ಷಗಳ ಕಾರಾಗೃಹ ವಾಸಕ್ಕೆ ತುತ್ತಾಗುತ್ತಾನೆ. ಕೊನೆಗೊಮ್ಮೆ ಅಲ್ಲಿಂದ ತಪ್ಪಿಸಿಕೊಂಡು, ಪರಿಶ್ರಮದಿಂದ ಅಪಾರ ನಿಧಿಯನ್ನೂ ವಶವಾಗಿಸಿಕೊಂಡು ರಾಜಾ ಮಲಯಸಿಂಹನೆಂಬ ನಾಮಾಂಕಿತದಿಂದ ಮೆರೆಯುತ್ತಾನೆ. ಈಗವನದು ಸೇಡು ತೀರಿಸಿಕೊಳ್ಳುವ ಕಾಲ. ತನಗೆ ಕೇಡು ಮಾಡಿದ್ದ ಹಣವಂತನೂ ಜಿಪುಣನೂ ಆದ ವ್ಯಕ್ತಿಯೊಬ್ಬನನ್ನು ಕೋಣೆಯಲಿ ಬಂಧಿಸಿಟ್ಟು, ಮೂರ್ನಾಲ್ಕು ದಿನಗಳವರೆಗೆ ಅನ್ನ–ನೀರು ಕೊಡದೆ ಸತಾಯಿಸುತ್ತಾನೆ. ಹಸಿವು ಸಹಿಸಲಾರದೇ ಆ ವ್ಯಕ್ತಿ ಏನಾದರೂ ತಿನ್ನಲು ನೀಡುವಂತೆ ಅಲ್ಲಿಯ ಕಾವಲುಗಾರನನ್ನು ಬೇಡಿಕೊಂಡಾಗ,

'ಅಯ್ಯೋ, ಇಲ್ಲಿ ತಿನ್ನುವ ಯಾವ ಪದಾರ್ಥವೂ ಸಿಗುವುದಿಲ್ಲ. ಕೇವಲ ರೊಟ್ಟಿ ಹಾಗೂ ಹಾಲು ಸಿಗುತ್ತದಷ್ಟೇ, ಅದೂ ತುಂಬಾ ದುಬಾರಿ' ಎನ್ನುತ್ತಾನೆ ಕಾವಲುಗಾರ.

'ಹಾಗಾದರೆ, ನನಗೆ ಒಂದು ರೊಟ್ಟಿ ಹಾಗೂ ಒಂದು ಲೋಟ ನೀರು ಸಾಕು.'

'ನಿಮಗೆ ಗೊತ್ತಿರಲಿಕ್ಕಿಲ್ಲ ಸ್ವಾಮಿ. ಇಲ್ಲಿ ಹಾಲಿಗಿಂತ ನೀರೇ ದುಬಾರಿ. ಒಂದು ರೊಟ್ಟಿಗೆ ಒಂದು ಲಕ್ಷ ವರಹ ಹಾಗೂ ಒಂದು ಲೋಟ ನೀರಿಗೆ ಎರಡು ಲಕ್ಷ ವರಹ.'

'ಅಯ್ಯಾ, ನಮ್ಮಲ್ಲಿ ಒಂದು ರೊಟ್ಟಿಗೆ ಒಂದಾಣೆ ಹಾಗೂ ನೀರು ಪುಕ್ಕಟೆಯಾಗಿ ಸಿಗುತ್ತದೆ.'

'ಇಲ್ಲಿ ಅಷ್ಟೇ ಬೆಲೆ. ಬೇಕೆಂದರೆ ತಂದು ಕೊಡುವೆ. ಇಲ್ಲದಿದ್ದರೆ ನಿಮ್ಮಿಷ್ಟ.'

'ಹಾಗಾದರೆ ಅರ್ಧ ರೊಟ್ಟಿ ಹಾಗೂ ಅರ್ಧ ಲೋಟ ನೀರು ತಂದು ಕೊಡು.'

'ನಮ್ಮಲ್ಲಿ ಅರ್ಧ ರೊಟ್ಟಿಗೂ ಪೂರಾ ರೊಟ್ಟಿಗೂ ಒಂದೇ ಬೆಲೆ. ನೀರೂ ಹಾಗೇಯೇ.'

ವಿಧಿಯಿಲ್ಲದೇ ಕೇಳಿದಷ್ಟು ಹಣ ನೀಡುವ ಮುಚ್ಚಳಿಕೆ ನೀಡಿ ರೊಟ್ಟಿ–ನೀರು ಪಡೆಯುತ್ತಾನೆ ಬಂಧಿತ ಸಾಹುಕಾರ.

ಮರುದಿನ, ಅದೇ ರೊಟ್ಟಿ ಹಾಗೂ ನೀರಿನ ಬೆಲೆಯನ್ನು ದುಪ್ಪಟ್ಟು ಮಾಡುತ್ತಾನೆ ಕಾವಲುಗಾರ.

ಹತಾಶೆ, ಅನಿವಾರ್ಯತೆಗಳು ಕೂಡ ವಸ್ತುವಿನ ಮೌಲ್ಯವನ್ನು ನಿಯಂತ್ರಿಸಬಲ್ಲವು ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ ಇಲ್ಲಿ. ನಾವೇ ನೋಡಿದ್ದೇವಲ್ಲ, ಕೊರೊನಾ ಸಮಯದಲ್ಲಿ ಏರಿದ ಆಕ್ಸಿಜನ್ ಸಿಲೆಂಡರಿನ ಬೆಲೆಯನ್ನು! ಉಳಿದ ಸಂದರ್ಭದಲ್ಲಿ ದಂಡಿಯಾಗಿ ಸಿಗುವ ಆಮ್ಲಜನಕಕ್ಕೆ ಯಾವುದೇ 'ಮೌಲ್ಯ' ನೀಡುವುದಿಲ್ಲ ನಾವು. ನಾಳೆ ಮನುಷ್ಯನೇನಾದರೂ ಮಂಗಳ ಗ್ರಹಕ್ಕೆ ಹೋದರೆ ಇದೇ ಆಮ್ಲಜನಕಕ್ಕೆ ಅಲ್ಲಿ ವಜ್ರದ ಬೆಲೆ ಬರಬಹುದು ಹಾಗೂ ವಜ್ರದ ಹರಳುಗಳು ಬಿಕರಿಯಾಗದಿರಬಹುದು.